**<u>ಸಾಕ್ಷಿಯನ್ನು  ದಿಃ 30.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಸ್.ಜಿ ವಕೀಲರಿಂದಃ-</u>**

ನಿಪಿ. 8 ಗಾಯದ ಪ್ರಮಾಣ ಪತ್ರ  ಮತ್ತು  ಹೊರ ರೋಗಿ ಚೀಟಿಯನ್ನು ಅನ್ನು ಹೊರತು ಪಡಿಸಿ  2 ನೇ ಎದುರುದಾರರು ಹಲ್ಲೆ ಮಾಡಿದರು ಎಂದು ತೋರಿಸಲು ಬೇರೆ ದಾಖಲೆ ಇಲ್ಲ ಎಂದರೆ ಸಾಕ್ಷಿ ಇರುತ್ತದೆ ಎಂದು ನುಡಿಯುತ್ತಾರೆ.  ಸಾಕ್ಷಿ ಪುನಃ 2 ನೇ ಎದುರುದಾರರ ವಿಷಯವಾಗಿ ಬೇರೆ ಯಾವುದೆ ದಾಖಲೆ ಇಲ್ಲ ಎನ್ನುತ್ತಾರೆ. 2 ನೇ ಎದುರುದಾರರ ಮೇಲೆ ಯಾವುದೆ ಆರೋಪ ಇಲ್ಲದಿದ್ದರೂ ಅವರ ಮೇಲೆ ಸುಳ್ಳು ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ.  ನಾನು ಮತ್ತು 2 ನೇ ಎದುರುದಾರರು ಒಂದೆ ಮನೆಯಲ್ಲಿ  ಇದ್ದೇವೆ ಎಂದು ತೋರಿಸಲು  ಯಾವುದೆ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮಾವ  ಭಾಗ ಮಾಡಿಕೊಟ್ಟ ನಂತರ 2 ನೇ ಎದುರುದಾರರು ಸಂಪೂರ್ಣವಾಗಿ ಕುಟುಂಬದಿಂದ ಹೊರಗೆ ಇದ್ದಾರೆ ಎಂದರೆ ಸರಿಯಲ್ಲ. 2 ನೇ ಎದುರುದಾರರು ದೌರಜ್ಯ ಎಸಗಿದ್ದಾರೆ ಎಂದು ತೋರಿಸಲು  ಈಗಾಗಲೆ ಹಾಜರು ಪಡಿಸಿದ ದಾಖಲೆ  ಹೊರತು ಪಡಿಸಿ ಬೇರೆ ದಾಖಲೆ ಇರುವುದಿಲ್ಲ. ನನ್ನ ದೂರಿನಲ್ಲಿ 2 ನೇ ಎದುರುದಾರರು 1 ನೇ ಎದುರುದಾರರ ಜೊತೆ ಸೇರಿ ಕೌಟುಂಬಿಕ ದೌರಜ್ಯ ಎಸಗಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿಯ ಶಿರೋನಾಮೆಯಲ್ಲಿ ನನ್ನ ಮಗ ಮತ್ತು ಮಗಳ ಹೆಸರು  ಸೇರಿಸಿಲ್ಲ ಎಂದರೆ ಸರಿ. ನಮ್ಮ ಕುಟುಂಬದ ಆಸ್ತಿಗೆ ಮತ್ತು ನನ್ನ ಜೀವಕ್ಕೆ ಯಾರಿಂದಾದರೂ ತೊಂದರೆ ಆದರೆ ಕುಟುಂಬದ ಎಲ್ಲಾ  ಸದಸ್ಯರನ್ನು ಸೇರಿಸುತ್ತಿದ್ದೆ ಎಂದರೆ ಸರಿಯಲ್ಲ.  ಅರ್ಜಿಯಲ್ಲಿ ನಮ್ಮ ಮಕ್ಕಳನ್ನು ಸೇರಿಸದ ಕಾರಣ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ.

ದೂರಿನಲ್ಲಿ  ಮಕ್ಕಳ ಹೆಸರನ್ನು ಬರೆಸಿರುತ್ತೇನೆ. ದೂರಿನಲ್ಲಿ  ಎದುರುದಾರರ ಜೊತೆ ಅಂಜು ಭವಾನಿ, ಜ್ಯೋತಿ ವಿಶ್ವನಾಥ, ತ್ರಿಭುವನ  ವಿಶ್ವನಾಥ, ಶೃತಿ,  ಈಶ್ವರೇಗೌಡರ ಮಗ ಭರತ್,  ರವರು ದೌರಜ್ಯ ಎಸಗಿದ್ದಾರೆ ಎಂದು ಹೇಳಿದ್ದು ಅವರನ್ನು ಯಾಕೆ ಸೇರಿಸಿಲ್ಲ ಎಂದರೆ ಸಿ.ಡಿ.ಪಿ.ಓ ಕಛೇರಿಯಲ್ಲಿ ಎಲ್ಲರನ್ನು ಸೇರಿಸಿಯೆ ದೂರು ಕೊಟ್ಟಿದ್ದೆ ಎನ್ನುತ್ತಾರೆ. ಸದರಿ ರವರನ್ನು ಈ ಕೇಸ್ ನಲ್ಲಿ ಎದುರುದಾರರನ್ನಾಗಿ ಮಾಡಿಲ್ಲ. ನಾನು ಸಲ್ಲಿಸಿದ ದೂರು

ಸಂಪೂರ್ಣ ಸಿವಿಲ್ ವಾಜ್ಯಕ್ಕೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಇಬ್ಬರೂ ಎದುರುದಾರರನ್ನು ಸೇರಿಸಿ ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತೇನೆ. ಆ ಬಗ್ಗೆ ಎನ್.ಸಿ.ಆರ್ ಇರುತ್ತದೆ. ಸದರಿ ದೂರಿನಲ್ಲಿ ಇಬ್ಬರೂ ಎದುರುದಾರರನ್ನು ಸೇರಿಸಿ ದೂರು ಕೊಟ್ಟಿದ್ದೇನೆ. ನಿಪಿ. 9 ರಲ್ಲಿ 2 ನೇ ಎದುರುದಾರರ ಹೆಸರು ಇರುವುದಿಲ್ಲ ಎಂದರೆ ಸರಿ. ನಿಪಿ. 5 ಮತ್ತು 7 ರಲ್ಲೂ ಸಹ 2 ನೇ ಎದುರುದಾರರ ಹೆಸರು ಇರುವುದಿಲ್ಲ ಎಂದರೆ ಸರಿ. ನಿಪಿ. 11 ರಿಂದ 14 ರ ಪೋಟೊಗಳಲ್ಲಿ 2 ನೇ ಎದುರುದಾರರು ಇರುವುದಿಲ್ಲ ಸರಿ. ಸಿವಿಲ್ ದಾವೆಯಲ್ಲಿನ ದಾಖಲೆಗಳನ್ನು ಈ ಕೇಸ್ ನಲ್ಲಿ ಯಾವ ಕಾರಣಕ್ಕಾಗಿ ಹಾಕಿದ್ದಿರಾ ಎಂದರೆ 1 ನೇ ಎದುರುದಾರರು ಮಾನಸೀಕವಾಗಿ ಹಿಂಸೆ ಕೊಟ್ಟಿದ್ದನ್ನು ತೋರಿಸಲು ಹಾಕಿದ್ದೇನೆ ಎಂದು ನುಡಿಯುತ್ತಾರೆ.

1997 ರಲ್ಲಿ ನನ್ನ ಮಾವನ ಎಲ್ಲಾ ಗಂಡು ಮಕ್ಕಳ ನಡುವೆ ವಿಭಾಗ ಆದ ನಂತರ ಪ್ರತ್ಯೇಕವಾಗಿರುತ್ತೇವೆ ಎಂದರೆ ಸರಿಯಲ್ಲ. ನಾನು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿ ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ 2 ನೇ ಎದುರುದಾರರನ್ನು ಈ ಕೇಸ್ ನಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಗಲಾಟೆ ನಡೆಯಿತು ಎಂದು ಹೇಳುವ ಸಮಯದಲ್ಲಿ 2 ನೇ ಎದುರುದಾರರು ಮತ್ತು ನಾವು ಒಂದೇ ಮನೆಯಲ್ಲಿ ವಾಸ ಇದ್ದೇವು ಎಂದು ತೋರಿಸಲು ಮನೆ ನಂಬರ್ ನಮೂದು ಮಾಡಿಲ್ಲ ಎಂದರೆ ಸಿ.ಡಿ.ಪಿ.ಓ ಕಛೇರಿಗೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. 2 ನೇ ಎದುರುದಾರರು ಯಾವುದೆ ರೀತಿಯಲ್ಲಿ ಮಾನಸೀಕ ಮತ್ತು ದೈಹಿಕ ಹಿಂಸೆ ನೀಡಿಲ್ಲ ಆದರೂ ಸುಳ್ಳು ಕೇಸ್ ಅನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಈ ಕಾಯಿದೆ ಅಡಿ ನನ್ನ ಅರ್ಜಿಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.